ವೈಸ್ ಛೇರ್ಮನ್ : ಈಗ ಮೇಲ್ಮನೆಯ ಸರ್ಕಾರಿ ಮುಖ್ಯ ಸಚೇತಕರು ಭೋಜನ ಕೂಟಕ್ಕೆ ನಮ್ಮ ಸದನದ ಸದಸ್ಯರನ್ನು ಆಹ್ವಾನಿಸಿದ್ದಾರೆ. ಈಗ ಸದನವನ್ನು ಮಧ್ಯಾಹ್ನ 2-45 ಗಂಟೆಗೆ ಸೇರುವಂತೆ ಮುಂದೂಡಲಾಗಿದೆ.

ಸಭೆಯು 1.54 ಗಂಟೆಗೆ ಮುಗಿದು ಮತ್ತೆ ಸದನವು 2-45 ಗಂಟೆಗೆ ಸೇರುವುದು.

ಸದನವು ಪುನಃ ಮಧ್ಯಾಹ್ನ 2 ಗಂಟೆ 45 ನಿಮಿಷಕ್ಕೆ ಸಮಾವೇಶಗೊಂಡಿತು
ಸಭಾಧ್ಯಕ್ಷರು ಪೀಠವನ್ನು ಅಲಂಕರಿಸಿದ್ದರು

7. ಪ್ರಕಟಣೆ

ಅಧ್ಯಕ್ಷರು: ವಿಧಾನ ಪರಿಷತ್ತಿನ ಮಾನ್ಯ ಸಭಾಪತಿಯವರಿಂದ ಈ ಕೆಳಕಂಡ ಸಂದೇಶ ಬಂದಿರುತ್ತದೆ. " ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯವಿಧಾನ ಹಾಗೂ ನಡವಳಿಕೆ ನಿಯಮ 118ರ ಮೇರೆಗೆ ವಿಧಾನ ಪರಿಷತ್ತು 2006ನೇ ಸಾಲಿನ ಕರ್ನಾಟಕ ಧನ ವಿನಿಯೋಗ (ಸಂಖ್ಯೆ 2) ವಿಧೇಯಕವನ್ನು ಈ ದಿನ ದಿನಾಂಕ 28.3.06 ರಂದು ಯಾವುದೇ ತಿದ್ದುಪಡಿಗಳಿಲ್ಲದೆ ಅಂಗೀಕರಿಸಲಾಗಿದೆ" ಯೆಂದು ತಿಳಿಸಿರುತ್ತಾರೆ.

ಅಧ್ಯಕ್ಷರು : ಈಗ ರೇವಣ್ಣನವರು ಒಂದು 10 ನಿಮಿಷದಲ್ಲಿ ಮಾತನಾಡಿ ಮುಗಿಸಬೇಕು. ನೀವು ಅಪರೂಪಕ್ಕೆ ಮಾತನಾಡುತ್ತಿದ್ದೀರಿ.

8. ವಿತ್ತೀಯ ಕಾರ್ಯಕಲಾಪ.

೨೦೦೬-೦೭ ನೇ ಸಾಲಿನ ಆಯವ್ಯಯ ಅಂದಾಜುಗಳ ಮೇಲೆ ಮುಂದುವರಿದ ಚರ್ಚೆ

ಶ್ರೀ ಹೆಚ್.ಡಿ.ರೇವಣ್ಣ (ಹೊಳೆನರಸೀಪುರ): ಮಾನ್ಯ ಸಭಾಧ್ಯಕ್ಷರೆ, ೨೦೦೬-೦೭ನೇ ಸಾಲಿನ ಬಜೆಟ್ ಮತ್ತು ಸಪ್ಲಿಮೆಂಟರಿ ಬಜೆಟ್ ಇವೆರಡರ ಬಗ್ಗೆಯೂ ಮಾತನಾಡಬೇಕಾಗುತ್ತದೆ.

ಶ್ರೀ ಜೆ.ಸಿ. ಮಾಧುಸ್ವಾಮಿ: ಸಪ್ಲಿಮೆಂಟರಿ ಬಜೆಟ್ ಮುಗಿದುಹೋಯಿತು.

ಶ್ರೀ ಹೆಚ್.ಡಿ.ರೇವಣ್ಣ: ಅದು ಮುಗಿದು ಹೋದರೆ ಬಜೆಟ್ ಮೇಲೆ ಮಾತನಾಡೋಣ, ಅದರಲ್ಲೇ ಬೇಕಾದರೆ, ಸಾಹೇಬರು ಉತ್ತರ ಕೊಡುವಾಗ ಕೊಡಲಿ. ನಮ್ಮದೇನೂ ಅಭ್ಯಂತರವಿಲ್ಲ. ಸನ್ಮಾನ್ಯ ಅಧ್ಯಕ್ಷರೆ, ಇವೊತ್ತಿನ ದಿವಸ ತಾವು ನಮ್ಮನ್ನ ಗುರ್ತಿಸಿ ಮಾತನಾಡಲು ನನಗೆ ಅವಕಾಶ ಕೊಟ್ಟಿದ್ದಕ್ಕಾಗಿ ಮೊದಲನೆಯದಾಗಿ ತಮಗೆ ಕೃತಜ್ಞತೆ ಸಲ್ಲಿಸುತ್ತಿದ್ದೇನೆ.

ಶ್ರೀ ಜೆ.ಸಿ.ಮಾಧುಸ್ವಾಮಿ: ಇದು ಅನ್ಯಾಯ ನಮ್ಮನ್ನು ಗುರ್ತಿಸಿದ್ದೀರೆಂದು ನೀವು ಈಗ ಹೇಳುವುದೇ? ರೇವಣ್ಣನವರೇ, ನಿಮ್ಮನ್ನು ಯಾರಾದರೂ ಗುರ್ತಿಸಬೇಕೇ?

ಅಧ್ಯಕ್ಷರು: ರೇವಣ್ಣನವರು ಬಹಳ ಅಪರೂಪಕ್ಕೆ ಮಾತನಾಡುತ್ತಾರೆ. ಮಾತನಾಡಲು ನಿಂತಿದ್ದಾರೆ, ಮಾತನಾಡಲಿ. ಮಾತನಾಡುವವರು ಇನ್ನೂ ಬಹಳಷ್ಟು ಸದಸ್ಯರಿದ್ದಾರೆ. ಈಗ 4.30 ಗಂಟೆಗೆ ಉತ್ತರ ಆರಂಭವಾಗುತ್ತದೆ.